ಮುಖ್ಯವೇ. ಹೀಗಾಗಿಯೇ ಪೀಟರ್‌ಮಾರಿಟ್ಸ್‌ಬರ್ಗ್ ರೈಲ್ವೇ ನಿಲ್ದಾಣದಲ್ಲಿ ಗಾಂಧಿಯನ್ನು ರೈಲಿನಿಂದ ಹೊರಹಾಕಿದ್ದು ಒಂದು ಘಟನೆಯಾಗಿ ಉಳಿಯಬಹುದಾಗಿತ್ತಾದರೂ, ಅಹಿಂಸಾತ್ಮಕ ಚಳವಳಿಯ ಮೂಲ ಬೀಜ ಅಲ್ಲಿ ಬಿತ್ತಿರಬಹುದು ಎಂದು ಗಾಂಧಿ ಬರೆಯುತ್ತಾರೆ. ಆದರೆ ಆ ವಿಚಾರ ಕೇವಲ ರೈಲಿನಲ್ಲಿ ಎಲ್ಲರೂ ಪ್ರಯಾಣಿಸಬಹುದಾದ ಸಮಾನ ಹಕ್ಕಿನ ಹೋರಾಟಕ್ಕೆ ಸೀಮಿತವಾಗದೇ ಭೇದಭಾವವನ್ನು ತೆಗೆಯುವ ಎಲ್ಲರೂ ಒಂದೆಂದು ಸಾರಬೇಕಾದ ಅವಶ್ಯ ಮತ್ತು ವಿಸ್ತೃತ ಬದಲಾವಣೆಯತ್ತ ಗಾಂಧಿಯವರನ್ನು ತಳ್ಳುತ್ತದೆ.

ಯೌವನಾವಸ್ಥೆಯಲ್ಲೇ ಅವರ ಜೀವನದಲ್ಲಿ ಎರಡು ದಟ್ಟವಾದ ಲಕ್ಷಣಗಳನ್ನು ನಾವು ಕಾಣಬಹುದು. ಒಂದು, ಯಾವುದೇ ವಿಚಾರವನ್ನು ಗಮನಿಸುವಾಗ ಅದರ ನೈತಿಕ ನೆಲೆಯನ್ನು ಪರೀಕ್ಷಿಸುವುದು. ನೈತಿಕ ನೆಲೆ ಅನೇಕ ಬಾರಿ ನಮ್ಮ ಹಿನ್ನೆಲೆ ಮತ್ತು ಪೂರ್ವಗ್ರಹಗಳ ಮೇಲೆ ಆಧಾರಿತವಾಗಿರುತ್ತದೆ. ನೈತಿಕತೆಯನ್ನು, ಅದರ ನೆಲೆಯನ್ನು ಸತತವಾಗಿ ನಿಕಷಕ್ಕೊಡ್ಡಬೇಕು. ಅದಕ್ಕೆ ಬೇಕಾದುದು ವಿಸ್ತೃತ ಓದು ಮತ್ತು ಸಂವಾದ. ಈ ಎರಡನ್ನೂ ನಾವು ಗಾಂಧಿಯ ಯೌವನಾವಸ್ಥೆಯಲ್ಲಿಯೇ ಕಾಣುತ್ತೇವೆ. ಹಲವು ಕಡೆ ತಮ್ಮ ನೈತಿಕತೆಯನ್ನು ಗಾಂಧಿ ಇತರರ ಮೇಲೆ ಹೇರುತ್ತಿದ್ದಾರೆ ಅನ್ನಿಸಿದರೂ, ಪ್ರತಿಬಾರಿಯೂ ಅದಕ್ಕೊಂದು ಡಿಸ್‌ಕ್ಲೇಮರ್ ಅನ್ನು ಗಾಂಧಿ ಕೊಡುತ್ತಾರೆ. 'ಇದು ನನ್ನ ನಂಬಿಕೆ ಮತ್ತು ನೀನು ಹೀಗೆ ಮಾಡಬೇಕು' ಎಂದು ಅನೇಕ ಬಾರಿ ತಮ್ಮ ಮಗನಿಗೆ ನಿರ್ದೇಶನ ಕೊಟ್ಟರೂ, ಕಡೆಗೆ 'ನಾನು ಹೇಳಿದೆನೆಂದು ಮಾಡಲೇಬೇಕೆಂದೇನೂ ಇಲ್ಲ. ನಿನಗೂ ಇದು ಸರಿ ಅನ್ನಿಸಬೇಕು' ಎನ್ನುವ ವಿಚಾರವನ್ನು ವ್ಯಕ್ತಪಡಿಸುತ್ತಾರೆ. ಹೀಗಿದ್ದರೂ ಗಾಂಧಿ ತಮ್ಮ ಸಂಸಾರದೊಂದಿಗೆ – ಮುಖ್ಯವಾಗಿ ಕಸ್ತೂರ್‌ಬಾ ಮತ್ತು ಮಕ್ಕಳೊಂದಿಗೆ ಇತರರಿಗಿಂತ ಕಟುವಾಗಿದ್ದರು ಅನ್ನುವ ಭಾವನೆ ಬರುತ್ತದೆ.

ದುಡ್ಡಿನ ಬಗ್ಗೆ ಜಾಗರೂಕವಾಗಿರುವುದು, ಲೆಕ್ಕಪತ್ರಗಳನ್ನು ಬರೆದಿಡುವುದು, ಸರಳ ಜೀವನವನ್ನು ತಮ್ಮದಾಗಿಸಿಕೊಳ್ಳುವುದು ಜನರೊಂದಿಗೆ ಬೆರೆತಿರುವುದು – ಈ ಎಲ್ಲ ಲಕ್ಷಣಗಳೂ ನಮಗೆ ಗಾಂಧಿಯವರ ಯೌವನಾವಸ್ಥೆಯಲ್ಲಿಯೇ ಕಾಣುತ್ತವೆ. ದಕ್ಷಿಣ ಆಫ್ರಿಕಾದ ಕಾಲದ ಆತ್ಮಕತೆ ನಿಜಕ್ಕೂ ಅವರ ಮಿಕ್ಕ ಜೀವನದ ತಯಾರಿಯಂತೆ ಕಾಣುತ್ತದೆ. ಆ ಹಂತದಲ್ಲಿ ನಮ್ಮ ದೇಶದ ರಾಜಕೀಯದ ಪ್ರಸ್ತಾಪವಿಲ್ಲವಾದ್ದರಿಂದ ಅದನ್ನು ವಸ್ತುನಿಷ್ಠವಾಗಿ ನೋಡಲು ಅವರಿಗೆ ಸಾಧ್ಯವೂ ಆಗಿದೆ. ಮಹಾತ್ಮನಾಗುವ ದಾರಿಯಲ್ಲಿ ಗಾಂಧಿಯ ವಿಚಾರಗಳು ರೂಪುಗೊಳ್ಳುವ ಪ್ರಕ್ರಿಯೆಯನ್ನು ಕಾಣುವುದು ನಿಜಕ್ಕೂ ಅದ್ಭುತವಾದ ವಿಚಾರವೇ.

ಇದೆಲ್ಲವನ್ನೂ ಒಂದೆಡೆಯಲ್ಲಿಡೋಣ, ಗಮ್ಮತ್ತಿನ ವಿಚಾರಕ್ಕೆ ಬರೋಣ. ಹೀಗೆ ಮತ್ತೊಬ್ಬರ ಆತ್ಮಚರಿತ್ರೆಯನ್ನು ಬರೆಯಲು ನಿಜಕ್ಕೂ ಸಾಧ್ಯವೇ? ಜೀವನ ಚರಿತ್ರೆಯನ್ನ ಬರೆಯಬಹುದು. ಆದರೆ ಆತ್ಮಚರಿತ್ರೆ? ಈ ಪುಸ್ತಕದ ಮೂಲ ಯೋಚನೆ ಸಂಗೀತಗಾರರಾದ ಟಿ.ಎಂ. ಕೃಷ್ಣ ಅವರಿಂದ ಬಂತೆಂದು ಗೋಪಾಲ ಗಾಂಧಿ ಹೇಳುತ್ತಾರೆ. ಹೀಗೆ ಆತ್ಮಚರಿತ್ರೆ ಬರೆಯುವುದರಲ್ಲಿರುವ ಸವಾಲುಗಳನ್ನು ಯೋಚಿಸೋಣ. ಮೊದಲಿಗೆ ಈ ಬಗ್ಗೆ ಮಹಾತ್ಮರ ಯಾವುದೋ ಪತ್ರ, ಬರವಣಿಗೆ, ದಾಖಲಾದ ಮಾತುಕತೆ – ಏನಾದರೊಂದು ಇರಬೇಕು. ಅದು ಗಾಂಧಿಯವರ ಮಾತಿನಲ್ಲೇ ಇರಬೇಕು. ಆ ಮಾತು ಗುಜರಾತಿಯಲ್ಲಿ ಅಥವಾ ಇಂಗ್ಲೀಷಿನಲ್ಲಿರಬಹುದು. ಅದನ್ನು ಒಂದು ಭಾಷೆ ಮತ್ತು ಶೈಲಿಗೆ ಒಗ್ಗಿಸಬೇಕು. ಇರುವ ದಾಖಲೆಗಳನ್ನು ಕಾಲಘಟ್ಟದಲ್ಲಿ ವಿಂಗಡಿಸಬೇಕು. ಮತ್ತು ಈ ಎಲ್ಲ ದಾಖಲೆಗಳ ಮೂಲಕ ಹರಿವು ಮುರಿಯದಂತೆ ಒಂದು ಕಥಾನಕವನ್ನು ಕಟ್ಟಬೇಕು. ಗೋಪಾಲ ಗಾಂಧಿಯವರ ಕೆಲಸ ಮಿಕ್ಕ ಜೀವನ ಚರಿತ್ರೆ ಅಥವಾ ಟಿಪ್ಪಣಿ ಬರೆದವರಿಗಿಂತ ಕಠಿಣವಾದದ್ದು ಎನ್ನುವುದನ್ನು ನಾವು ಗಮನಿಸಬೇಕು. ಅಲ್ಲಲ್ಲಿ ಆತ್ಮಕಥಾನಕವಾಗಿದ್ದ ಪರಿಕರಗಳನ್ನು ಹೆಣೆಯುವುದು ಸರಳವಾದ ಮಾತೇನೂ ಅಲ್ಲ. ಆದರೆ ಗಾಂಧಿಯ ಬಗ್ಗೆ ಇರುವ ವ್ಯಾಪಕವಾದ ಸಾಹಿತ್ಯದಲ್ಲಿ ಅವರೇ ಹೇಳಿದ್ದೇನು, ಅದು ಆವರ ಜೀವನಾನುಭವದಿಂದ ಹೇಗೆ ಚಿಮ್ಮಿತು, ಇದರಿಂದ ನಮಗೆ ಗಾಂಧಿಯವರ ವ್ಯಕ್ತಿತ್ವದ ಬಗ್ಗೆ ಹೊಸ ಒಳನೋಟಗಳು ಸಿಗಬಹುದೇ... ಹೀಗೆ ಟಿಪ್ಪಣಿಯಿಲ್ಲದ ಅಪ್ಪಟ ಬರವಣಿಗೆಯನ್ನು